ಶ್ರೀ ಎಂ. ರಾಮಪ್ಪ.—ಯಾರಾದರೂ ಖಾಸಗಿ ಕಾಲೇಜಿನವರು ಇಲ್ಲಿಗೆ ಬಂದು ಶಿಫಾರಸ್ಸು ಮಾಡಿಸಿದರೆ ಅಂಥವರಿಗೆ ಒಂದು ಸೀಟನ್ನು ಕೊಡುತ್ತಾರೆ. ಹಾಗೆ ಒಂದು ಸೀಟನ್ನು ಅಂಥವರಿಗೆ ಯಾವ ಮುಲಾಜಿಲ್ಲದೆ ಕೊಡುತ್ತಾರೆ. ಇಂತಹ ತಾರತಮ್ಯವನ್ನು ಏಕೆ ತೋರಿಸುತ್ತೀರಿ ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ಒಬ್ಬ ಸದಸ್ಯರಾಗಿ ಈ ರೀತಿ ಮಾತನಾಡತಕ್ಕದ್ದಲ್ಲ. ತಾವು ಸ್ವಲ್ಪ ಜಾಗರೂಕತೆಯಿಂದ ಮಾತನಾಡಬೇಕಂ. ಅವರು ಇಲ್ಲಿ ಬಂದು ಹೆಚ್ಚಿಗೆ ದುಡ್ಡು ಕೊಟ್ಟು ಸೀಟು ಮಾಡಿಸಿಕೊಂಡು ಹೋಗುತ್ತಾರೆ ಎಂದಂ ಮಾನ್ಯ ಸದಸ್ಯರು ಆಪಾದನೆ ಮಾಡುತ್ತಾರೆ. ಈ ರೀತಿ ಆಪಾದನೆ ಮಾಡುವುದಕ್ಕೆ ಸದಸ್ಯರಿಗೆ ಹಕ್ಕಿಲ್ಲವೆಂದು ನನ್ನ ಭಾವನೆ.

ಶ್ರೀ ಎಂ. ರಾಮಪ್ಪ.—ನಮಗೆ ತಾರತಮ್ಯವಾಗಿದೆ. ಆದ್ದರಿಂದ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ. ಶಿಫಾರಸ್ಸು ಮಾಡುವಷ್ಟು ಶಕ್ತಿ ನಮ್ಮಲ್ಲಿಲ್ಲ. ಒಬ್ಬ ಸೂಪರಿಂಟೆಂಡೆಂಟ್ ಒಂದು ಸಾರಿ ಅಥವಾ ಎರಡು ಸಾರಿ ಕೇಳಬಹುದು. ಅಷ್ಟು ಸಾರಿ ಬಂದು ಕೇಳಿದರೆ ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಾನು ನಿಮ್ಮಲ್ಲಿಗೆ ಬಂದೂ ೧೦ ಸಾರಿ ಕೇಳಿದಾಗ ನಮ್ಮ ಮಾತನ್ನು ಕೇಳಲೇ ಬೇಕಾಗುತ್ತದೆ. ಇದರಲ್ಲಿ ನೀವೇ ಮಾಡಬೇಕು ಅಂತಾ ಇಲ್ಲ. ಉದ್ಯೋಗಸ್ಥರು ಮಾಡಬಹುದು, ಯಾರಾದರೂ ಮಾಡಬಹುದು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ವಿಚಾರವನ್ನು ಪೂರ್ತಿಯಾಗಿ ತಿಳಿದು ಕೊಳ್ಳದೆ ಮಾತನಾಡಿದರೆ ಹ್ಯಾಗೆ ? ನಾವು ದಾವಣಗೆರೆಯಲ್ಲಿ ಕೊಟ್ಟಿರುವುದು ಆಟೋಮ್ಯಾಟಿಕ್ ಎಲೆಕ್ಟ್ರಿಕಲ್ ಲಾಂಡರಿಗೆ. ಆಟೋಮ್ಯಾಟಿಕ್ ಎಲೆಕ್ಟ್ರಿಕಲ್ ಲಾಂಡರಿಗೆ ಕೊಡುವುದಕ್ಕೂ ಮೆಡಿಕಲ್ ಕಾಲೇಜಿಗೆ ಕೊಡುವುದಕ್ಕೂ ಏನು ಸಂಬಂಧ ಎಂಬುದು ನನಗೆ ಗೊತ್ತಿಲ್ಲ. ಲಾಂಡರಿಯಲ್ಲಿ ಒಗೆಯತಕ್ಕ ಬೆಡ್‌ಶೀಟ್‌ಗಳು ನಮ್ಮ ರೋಗಿಗಳಿಗೆ ಉಪಯೋಗವಾಗುತ್ತದೆಯೇ ಹೊರತು ಹಾಸಿಗೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ರಾಮಪ್ಪನವರು ಯಾವ್ಯಾವುದಕ್ಕೆ ಹಣವನ್ನು ಕೊಟ್ಟಿದ್ದೀರಿ ಎನ್ನುವುದನ್ನು ಹಿಂದೆ ನನ್ನ ಹತ್ತಿರ ಹೇಳುತ್ತಿದ್ದರು. ದಾವಣಗೆರೆ ಆಟೋಮ್ಯಾಟಿಕ್ ಲಾಂಡರಿಗೆ ದುಡ್ಡು ಕೊಟ್ಟರೆ ಇವರಿಗೆ ಏನೂ ಕಷ್ಟನೋ ನನಗೆ ಗೊತ್ತಿಲ್ಲ. ಅವರು ಆಸ್ಪತ್ರೆಗೆ ಏನೇನೂ ಸೌಲಭ್ಯಗಳು ಬೇಕೋ ಅದನ್ನು ಬೇಕಾದರೆ ಒದಗಿಸಿಕೊಡೋಣ. ಆದರೆ ತಾರತಮ್ಯ ಮಾಡಿದ್ದೀರಿ ಎಂದು ಹೇಳುವುದು ಸರಿಯಲ್ಲ. ಖಾಸಗೀ ಕಾಲೇಜಿನವರು ಶಿಫಾರಸ್ಸು ಮಾಡಿ ಸೀಟನ್ನೆ ತೆಗೆದುಕೊಂಡು ಹೋಗಿದ್ದೀರೆಂದು ಹೇಳುವುದು ಅಧಾರ ರಹಿತವಾದುದು. ಬಳ್ಳಾರಿಗೆ ಅವರು ಸದಸ್ಯರಾಗಿದ್ದಾರೆ ನಿಜ. ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಬಳ್ಳಾರಿ ಆಸ್ಪತ್ರೆಗೆ ಏನೇನು ಸೌಲಭ್ಯಗಳು ಬೇಕೋ ಅದನ್ನೆಲ್ಲಾ ಮಾಡಿಕೊಡುವುದು ನಮ್ಮ ಧರ್ಮವೇ ಹೊರತು ಬೇರೆಯವರಿಗೆ ಏತಕ್ಕೆ ಕೊಟ್ಟಿದ್ದೀರೆಂದು ಕೇಳುವುದು ಸರಿಯಲ್ಲ. ತಾವು ಕೇಳುವ ರೀತಿಯಾದರೂ ಸರಿಯೇ ? ನಾವು ಆಟೋಮ್ಯಾಟಿಕ್ ಎಲೆಕ್ಟ್ರಿಕ್ ಲಾಂಡರಿಗೆ ದುಡ್ಡು ಕೊಟ್ಟರೆ ನೀವು ಮೆಡಿಕಲ್ ಕಾಲೇಜಿಗೆ ಕೊಟ್ಟಿದ್ದರೆಂದು ತಿಳಿದುಕೊಂಡರೆ ನಾವು ಏನು ಮಾಡುವುದು ? ಮಾನ್ಯ ಸದಸ್ಯರ ಕ್ಷೇತ್ರದಲ್ಲಿರುವ ಆಸ್ಪತ್ರೆಗೆ ಏನೇನು ಸೌಲಭ್ಯಗಳು ಬೇಕೋ ಅವನ್ನೆಲ್ಲಾ ಬರೆದು ತಿಳಿಸಲಿ ಅಥವಾ ನನ್ನ ಹತ್ತಿರ ಬಂದು ಚರ್ಚೆ ಮಾಡಲಿ. ಅದಕ್ಕೆ ಏನೂ ತೊಂದರೆಯಿಲ್ಲ.

ಹುನಗುಂದ ತಾಲ್ಲೂಕಿನಲ್ಲಿರುವ ವೈದ್ಯಕೀಯ ಉಪಕೇಂದ್ರಗಳು

೧೬೯. ಎಸ್.ಜಿ. ನಂಜಯ್ಯನಮಠ್ (ಗುಳೇದಗುಡ್ಡ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ವೈದ್ಯಕೀಯ ಉಪಕೇಂದ್ರಗಳು ಎಷ್ಟು ವರ್ಷದಿಂದ ಕೆಲಸ ಮಾಡುತ್ತಿವೆ ?

ಆ) ಅಲ್ಲಿಯ ಸಾರ್ವಜನಿಕರು ೨೫ ಸಾವಿರ ರೂ. ಖರ್ಚು ಮಾಡಿ ಕಟ್ಟಡ ನಿರ್ಮಾಣದ ಸಲುವಾಗಿ ಕಟ್ಟಡದ ಪಾಯದ ಮಟ್ಟದವರೆಗೆ ಕಟ್ಟಡ ಕಟ್ಟಿದ್ದಾರೆಯೇ ?

ಇ) ಕಟ್ಟಿದ್ದರೆ ಇನ್ನೂ ಳಿದ ಕಟ್ಟಡವನ್ನು ಇಲ್ಲಿಯವರೆಗೂ ಪೂರ್ತಿಗೊಳಿಸದಿರಲು ಕಾರಣವೇನು?

ಈ) ಕಟ್ಟಡವನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ, ಕುಟುಂಬ ಕಲ್ಯಾಣ ಸಚಿವರು).—

ಅ) ಈ ತಾಲ್ಲೂಕಿನಲ್ಲಿರುವ ಒಟ್ಟು ಎಂಟು ಪ್ರಾಥಮಿಕ ಆರೋಗ್ಯ ಘಟಕಗಳು ಆಯಾ ಹೆಸರಿನ ಮುಂದೆ ತೋರಿಸಿರುವ ದಿನಾಂಕದಿಂದ ಕಾರ್ಯ ನಿರ್ವಹಿಸುತ್ತಿವೆ.

	ಪ್ರಾಥಮಿಕ ಆರೋಗ್ಯ ಘಟಕ		ದಿನಾಂಕ
೧	ಮರೋಳ	...	೨೪-೧೧-೮೮
೨	ಕವಂತಗಿ	...	೨೩-೧-೮೬
೩	ಕಂದಗಾಲ	...	೨೪-೧೧-೮೮
೪	ಕೂಡಲಸಂಗಮ	...	೪-೭-೮೪
೫	ಹಿರೇಸಿಂಗನಗಂತಿ	...	೪-೭-೮೪
೬	ಗುಡೂರ	...	೪-೭-೮೪
೭	ಚಿತ್ತರಗಿ	...	೨೬-೨-೮೧
೮	ಕರಡಿ :	ಇದು ತಾಲ್ಲೂಕು ಅಭಿವೃದ್ಧಿ ಮಂಡಲಿಯಿಂದ ೧೯೭೯ರಲ್ಲಿ ಸರ್ಕಾರವೇ ವಹಿಸಿಕೊಂಡು ನಡೆಸುತ್ತಿರುವ ಆಸ್ಪತ್ರೆ	

ಆ)

ಪ್ರಾಥಮಿಕ ಆರೋಗ್ಯ ಘಟಕಗಳು		
೧ ಮಂರೋಳ	...	ಇದರ ಕಟ್ಟಡಕ್ಕಾಗಿ ಸಾರ್ವಜನಿಕರು ೨೫ ಸಾವಿರ ರೂ.ಗಳನ್ನು ಸ್ಥಳೀಯ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದಾರೆ. ನಿವೇಶನವನ್ನು ಇನ್ನೂ ಒದಗಿಸಿಲ್ಲ.
೨ ಕವಂತಗಿ	...	ಇದರ ಕಟ್ಟಡಕ್ಕಾಗಿ ಗ್ರಾಮಸ್ಥರು ಜಮೀನು ಕೊಟ್ಟಿದ್ದಾರೆ ಮತ್ತು ತಮ್ಮ ವಂತಿಗೆಯ ಹಣದಲ್ಲಿ ಲಿಂಟಲ್ ಮಟ್ಟದವರೆಗೂ ಕಟ್ಟಡವನ್ನು ಕಟ್ಟಿದ್ದಾರೆ.
೩ ಕಂದಗಾಲ	...	ಸಾರ್ವಜನಿಕರು ತಮ್ಮ ವಂತಿಗೆಯ ಹಣದಲ್ಲಿ ಕಟ್ಟಡವನ್ನು ಬೇಲ್ಬಾವಣಿಯ ಮಟ್ಟಕ್ಕೆ ಕಟ್ಟಿದ್ದಾರೆ.
೪ ಕೂಡಲ ಸಂಗಮ	...	ಈ ಕಟ್ಟಡಕ್ಕಾಗಿ ವಂತಿಗೆಯನ್ನು ನೀಡಲು ಸಾರ್ವಜನಿಕರು ಅಸಹಾಯಕರಿದ್ದಾರೆಂದು ತಿಳಿದುಬಂದಿದೆ ಮತ್ತು ಕಟ್ಟಡಕ್ಕೆ ಬೇಕಾಗುವ ಜಮೀನನ್ನು ಇನ್ನೂ ಒದಗಿಸಬೇಕಾಗಿದೆ.
೫ ಹಿರೇಸಂಗಂತಿ	...	ಭಾರತ ಜನಸಂಖ್ಯಾ ಯೋಜನೆಯ ಆಡಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ, ಪ್ರಾಥಮಿಕ ಆರೋಗ್ಯ ಘಟಕ ಕಟ್ಟಡವನ್ನು ಇನ್ನು ಕಟ್ಟಿಲ್ಲ.
೬ ಗುಡೂರ	...	ಈ ಕಟ್ಟಡಕ್ಕೆ ಸಾರ್ವಜನಿಕರು ೨೫ ಸಾವಿರ ರೂ.ಗಳನ್ನು ವಂತಿಕೆ ಕೊಟ್ಟಿದ್ದಾರೆ. ಕಟ್ಟಡವು ಪ್ಲಿಂತ್ ಹಂತಕ್ಕೆ ಬಂದಿದೆ.
೭ ಚಿತ್ತರಗಿ	...	ಜಮೀನನು ಮತ್ತು ವಂತಿಗೆಯನ್ನು ನೀಡಿದ್ದಾರೆ. ಇನ್ನೂ ಘಟಕದ ಕಟ್ಟಡವನ್ನು ನಿರ್ಮಿಸಿಲ್ಲ.
೮ ಕರಡಿ	...	ಈ ಆಸ್ಪತ್ರೆಯನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿಯುವರಿಂದ ಕಟ್ಟಡದ ಸಹಿತ ಇಲಾಖೆಗೆ ವರ್ಗಾಯಿಸಲಾಗಿದೆ. ಈ ಕಟ್ಟಡದಲ್ಲಿಯೇ ಪ್ರಾಥಮಿಕ ಆರೋಗ್ಯ ಘಟಕ ಕಾರ್ಯ ನಿರ್ವಹಿಸುತ್ತಿದೆ.

(ಶ್ರೀ ಮಂತ್ರಿ ಈ)

ಪ್ರಾಥಮಿಕ ಆರೋಗ್ಯ ಘಟಕಗಳು	
೧ ಮುರೋಳ ...	ಈ ಗ್ರಾಮವು ಕೃಷ್ಣಾ ವ್ಯಾಲ್ಲಿ ಯೋಜನೆ ಆಡಿಯಲ್ಲಿ ಮುಳುಗಡೆ ಪ್ರದೇಶದಲ್ಲಿ ಬರುವುದು. ಹೊಸ ನಿವೇಶನಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ಹೊಸ ಪಟ್ಟಣ ಪ್ರದೇಶದಲ್ಲಿ ಇದರ ಕಟ್ಟಡವು ಬರುವುದು. ಹೊಸ ಪಟ್ಟಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡಕ್ಕಾಗಿ ಬೇಕಾಗುವ ಭೂಮಿಯನ್ನು ಒಪ್ಪಗಿಸಲು ಕಾರ್ಯನಿರ್ವಾಹಕ ಅಭಿಯಂತರರು ಪುನರ್ವಸತಿ ವಿಭಾಗ ಇಲ್ಲಕಲ್ಲ. ಅವರಿಗೆ ಬರೆಯಲಾಗಿದೆ. ಭೂಮಿ ಒದಗಿಸಲು ಪುನರ್ವಸತಿ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದೆ. ಆದರೆ ಭೂಮಿಯನ್ನು ಇನ್ನೂ ಕೊಟ್ಟಿಲ್ಲ.
೨ ಕಮತಗಿ ...	ಗ್ರಾಮಸ್ಥರು ಜಮಿನು ಕೊಟ್ಟಿದ್ದಾರೆ. ತಮ್ಮ ವಂತಿಗೆ ಹಣದಲ್ಲಿ ಕಟ್ಟಡವನ್ನು ಲಿಂಟಲ್ ಮಟ್ಟದವರೆಗೂ ಕಟ್ಟಿದ್ದಾರೆ.ಉಳಿದ ಕಟ್ಟಡದ ಭಾಗವನ್ನು ಲೋಕೋಪಯೋಗಿ ಕಾರ್ಯನಿರ್ವಾಹಕ ಅಭಿಯಂತರರು, ಬಾಗಲಕೋಟೆ ಅವರು ಪೂರ್ಣಗೊಳಿಸಬೇಕು.
೩ ಕಂದಗಲ ...	ಸಾರ್ವಜನಿಕರು ತಮ್ಮ ವಂತಿಗೆ ಹಣ ರೂ. ೨೫,೦೦೦ಗಳಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ. ಬಾಗಲಕೋಟೆ ಲೋಕೋಪಯೋಗಿ ಇಲಾಖೆಯವರು ೨೫,೦೦೦ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಕಟ್ಟಡದ ಮೇಲ್ಛಾವಣಿ ಹಾಕಲಾಗಿದೆ. ಗೋಡೆಗಳಿಗೆ ಪ್ಲಾಸ್ಟರಿಂಗ್ ನೆಲದ ಹಾಸಿಗೆ ಬಾಗಿಲು ಕಿಟಕಿಗಳನ್ನು ಕೂಡಿಸುವುದು. ನೈರ್ಮಲ್ಯದ ಜೋಡಣೆ ಮತ್ತು ವಿದ್ಯುತ್ ಅಳವಡಿಸುವಿಕೆ ಇವೆಲ್ಲ ಕೆಲಸಗಳು ಬಾಕಿ ಉಳಿದಿವೆ. ಸಾರ್ವಜನಿಕರು ಇದಕ್ಕಿಂತ ಹೆಚ್ಚಿಗೆ ಹಣ ಕೊಡಲು ಸಿದ್ಧರಿಲ್ಲ.
೪ ಕೂಡಲ ಸಂಗಮ ...	ಸಾರ್ವಜನಿಕರು ಪಂತಿಗೆಯನ್ನು ಕೊಡಲು ಅಸಹಾಯಕರಿದ್ದಾರೆ. ಈ ಗ್ರಾಮವು ಮುಳುಗಡೆ ಪ್ರದೇಶದಲ್ಲಿ ಬರುತ್ತದೆ. ಆದ್ದರಿಂದ ಕಾರ್ಯನಿರ್ವಾಹಕ ಅಭಿಯಂತರರು ಪುನರ್ವಸತಿ ವಿಭಾಗ ಇಲಕಲ್ಲ ಅವರು ಜಮಿನು ಒದಗಿಸಬೇಕಾಗಿದೆ. ಆದಕಾರಣ ಕಟ್ಟಡವನ್ನು ಕಟ್ಟಿಲ್ಲ.
೫ ಹಿರೇಸಿಂಗಸಗುತ್ತಿ...	ಕಟ್ಟಡದ ಕಾರ್ಯವನ್ನು ಸ್ಥಳೀಯಂ ಗ್ರಾಮಪಂಚಾಯ್ತಿಯೇ ವಹಿಸಿಕೊಂಡಿದೆ. ನಿವೇಶನವನ್ನು ಕೊಟ್ಟಿದ್ದಾರೆ. ಭಾರತ ಜನಸಂಖ್ಯಾ ಯೋಜನೆ ಆಡಿಯಲ್ಲಿ (ಐಪಿಪಿ) ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಆದರೆ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡವನ್ನು ಇನ್ನೂ ಕಟ್ಟಲಾಗಿಲ್ಲ.
೬ ಗುಡೂರ ...	ರೂ. ೨೫,೦೦೦ ವಂತಿಗೆ ಕೊಟ್ಟಿದ್ದಾರೆ. ಕಟ್ಟಡವು ಪ್ಲಿಂಥ್ ವಂಟ್ಟಕ್ಕೆ ಬಂದಿದೆ. ವಂದಿನ ಕೆಲಸವು ಬರುವಂತೆ ಇಲ್ಲ. ಆದರೆ ಭಾರತ ಜನಸಂಖ್ಯಾ ಯೋಜನೆ ಆಡಿಯಲ್ಲಿ (ಐಪಿಪಿ) ಕಟ್ಟಡಗಳ ಕೆಲಸ ಅತಿವೇಗದಿಂದ ನಡೆಯುತ್ತಿದೆ.
೭ ಚಿತ್ತರಗಿ ...	ವಂತಿಗೆ ಹಣ ಮತ್ತು ಜಮಿನನ್ನು ಕೊಟ್ಟಿದ್ದಾರೆ. ಇನ್ನೂ ಕಟ್ಟಡವನ್ನು ಕಟ್ಟಿಲ್ಲ.
೮ ಕರಡಿ ...	ಇದು ೧೯೭೯ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ವಹಿಸಿಕೊಂಡ ಆಸ್ಪತ್ರೆಯಾಗಿದೆ. ಕಟ್ಟಡವು ಇದ್ದು ಅದನ್ನು ಆರೋಗ್ಯ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಎಸ್. ಜಿ. ನಂಜಯ್ಯ ಮಂತ್ರಿ.— ಪ್ರಶ್ನೆ ಬಂದಿರುವುದು ಇಷ್ಟೆ ನನ್ನ ಗೂಡೂರ್ ಕ್ಷೇತ್ರದಲ್ಲಿ ೨೫ ಸಾವಿರ ರೂಪಾಯಿಗಳನ್ನು ಸಾರ್ವಜನಿಕರು ಕೊಟ್ಟಿದ್ದಾರೆ. ಈಗ ಪ್ರಾಥಮಿಕ ಆರೋಗ್ಯ ಘಟಕ ೧೯೮೦–೮೧ರವರೆವಿಗೂ ಪ್ಲಿಂತ್ ಹಂತಕ್ಕೆ ಬಂದಿದೆ. ೧೯೮೧ರಿಂದ ಇಲ್ಲಿಯವರೆವಿಗೂ ಸರ್ಕಾರದವರು ಹಣವನ್ನು ಕೊಟ್ಟಿಲ್ಲ. ಪಿಡಬ್ಲ್ಯೂಡಿಯವರಿಗೆ ಹಣ ಕೊಟ್ಟರೆ ಅದನ್ನು ಬೇಗ ಮಂಜೂರು ಮಾಡಬಹುದು. ಊರು ಬಿಟ್ಟು ಒಂದು ಕಿಲೋಮೀಟರ್ ದೂರದಲ್ಲಿ ಆಸ್ಪತ್ರೆ ಇರುವುದರಿಂದ ನಾಲ್ಕು ಎಕರೆ ಜಮೀನನ್ನು ತಮ್ಮ ಇಲಾಖೆಗೆ ಪುಕ್ಕಟೆಯಾಗಿ ಬಿಟ್ಟು ಕೊಟ್ಟಿದ್ದಾರೆ. ಈಗ ಅಲ್ಲಿ ಕ್ವಾರ್ಟರ್ಸ್ ಕಟ್ಟುತ್ತಿರುವುದು ಆರ್‌ಸಿಸಿಯವರೆವಿಗೂ ಬಂದಿದೆ. ಆಸ್ಪತ್ರೆ ಕಟ್ಟಿದೆ ಕ್ವಾರ್ಟರ್ಸ್ ಕಟ್ಟುತ್ತಿದ್ದಾರೆ. ೧೯೮೦–೮೧ನೇ ಸಾಲಿನಲ್ಲಿ ೨೬.೮೩ರ ರೂಪಾಯಿಗಳನ್ನು ಖರ್ಚುಮಾಡಿ ಸಾರ್ವಜನಿಕರು ಅದನ್ನು ಕಟ್ಟಿಕೊಟ್ಟಿದ್ದಾರೆ, ಇನ್ನೂ ನೀವು ಹಣವನ್ನು ಬಿಡುಗಡೆ ಮಾಡಿಲ್ಲ. ಆರು ವರ್ಷದಿಂದ ಆ ಕಟ್ಟಡದ ಕೆಲಸ ನಡೆಯುತ್ತಿಲ್ಲ. ಅದರ ಬಗ್ಗೆ ಈ ವರ್ಷ ಹಣ ಬಿಡುಗಡೆ ಮಾಡಿ ಕಟ್ಟಡದ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎಚ್. ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ, ಹೋದ ವರ್ಷವೇ ಈ ವಿಷಯವನ್ನು ಗಮನಕ್ಕೆ ತಂದಿದ್ದರೆ ಶೀರ್ಷಿಕೆ ಮಾಡಬಹುದಾಗಿತ್ತು. ಈಗ ಅದನ್ನು ನನ್ನ ಗಮನಕ್ಕೆ ತಂದಿದ್ದೀರಿ ಆ ಕೆಲಸವನ್ನು ಮಾಡುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯ ಮಂತ್ರಿ.— ಅವರು ಹೇಳಿದ್ದು ನಿಜ ಅವರ ಗಮನಕ್ಕೆ ನಾನು ತರಲಿಲ್ಲ. ಇನ್ನಾರಾದರೂ ಅವರ ಗಮನಕ್ಕೆ ತಂದಿದ್ದೆ. ಈ ಸಾರಿ ಮಾಡೋಣವೆಂದು ಹೇಳಿದ್ದರು. ಇನ್ನೂ ಮೇಲಾದರೂ ಅದಕ್ಕೆ ಹಣ ಬಿಡುಗಡೆ ಮಾಡುವುದನ್ನು ತಾವು ದಯವಿಟ್ಟು ಮಾಡಿ. ಮತ್ತೊಂದು ವಿಷಯ, ನಿವಂಗೆ ತಪ್ಪು ವರದಿಯನ್ನು ಕೊಟ್ಟಿದ್ದಾರೆ. ಕಮತಗಿಯಲ್ಲಿ ಲಿಂಟಲ್ ಹಂತದ ವರೆವಿಗೂ ಕಟ್ಟಿದ್ದಾರೆಂದು ತಪ್ಪಾಗಿ ವರದಿ ಕೊಟ್ಟಿದ್ದಾರೆ. ಲಿಂಟಲ್‌ವರೆವಿಗೂ ಕಟ್ಟಿಲ್ಲ, ಆರ್‌ಸಿಸಿ–ವರೆವಿಗೂ ಕಟ್ಟಿದ್ದಾರೆ. ಇನ್ನೂ ಉಳಿಕೆ ಕೆಲಸ ಮಾತ್ರ ಉಳಿದಿದೆ.

ವೈದ್ಯಕೀಯ ಸೀಟುಗಳನ್ನು ಗೊತ್ತುಪಡಿಸುವಿಕೆ

೧೬೧೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಆರೋಗ್ಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪–೮೫ ಹಾಗೂ ೧೯೮೫–೮೬ನೇ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳಿಗೆ ನಿಗದಿಯಾದ ಸೀಟುಗಳ ಸಂಖ್ಯೆ ಎಷ್ಟು ? ಮತ್ತು ಸರ್ಕಾರದ ಸೀಟುಗಳೆಷ್ಟು ?

ಆ) ಯಾವ ಯಾವ ವೈದ್ಯಕೀಯ ಕಾಲೇಜುಗಳಿಗೆ ಎಷ್ಟೆಷ್ಟು ಸೀಟುಗಳನ್ನು ಹೆಚ್ಚಿಸಲಾಗಿದೆ ? ಹೆಚ್ಚಿಸಿದರೆ ಅದಕ್ಕೆ ಕಾರಣವೇನು ?

ಡಾ॥ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ)

ಸರ್ಕಾರದ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಹೆಸರು.	ನಿಗದಿ ಯಾದ ಸೀಟು ೧೯೮೪–೮೫	ಸರ್ಕಾರದ ಸೀಟುಗಳ ಸಂಖ್ಯೆ ೧೯೮೪–೮೫	ನಿಗದಿ ಯಾದ ಸೀಟು ೧೯೮೫—೮೬	ಸರ್ಕಾರಿ ಸೀಟುಗಳ ಸಂಖ್ಯೆ ೧೯೮೫—೮೬
ಸರ್ಕಾರಿ ಕಾಲೇಜು				
೧. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.	೧೫೪	೧೫೪	೧೫೫	೧೫೫